ಸುಳ್ಯ ತಾಲ್ಲೂಕಿನ ಸರಕಾರಿ ಕಿರಿಯ ಕಾಲೇಜುಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ

೧೪೪೪ (೪೫೦) ಶ್ರೀ ಕೆ. ಕುಶಾಲ (ಸುಳ್ಯ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ.—

ಅ) ಸುಳ್ಯ ತಾಲ್ಲೂಕಿನ ಬೆಳ್ಳಾರೆ ಸರ್ಕಾರಿ ಕಿರಿಯ ಕಾಲೇಜು, ಪಂಜ ಸರ್ಕಾರಿ ಕಿರಿಯ ಕಾಲೇಜು ಸುಳ್ಯ, ಸರ್ಕಾರಿ ಕಿರಿಯಕಾಲೇಜು ಮತ್ತು ಸುಳ್ಯ ವಿಧಾನಸಭಾ ಕ್ಷೇತ್ರದ ಪ್ರತ್ತೂರು ತಾಲ್ಲೂಕಿನ ಕಾಣಿಯೂರು ಸರ್ಕಾರಿಕಿರಿಯ ಕಾಲೇಜುಗಳಲ್ಲಿ ವಿವಿಧ ಪಾಠೇತರ ವಿಷಯಗಳಲ್ಲಿ ಖಾಲಿ ಇರುವ ಉಪನ್ಯಾಸಕರ ಮತ್ತು ಅಧ್ಯಾಪಕರ ಸಂಖ್ಯೆ ಎಷ್ಟು ?

ಆ) ಸದರಿ ಕಿರಿಯ ಕಾಲೇಜುಗಳಲ್ಲಿ ಖಾಲಿ ಇರುವ ಶಿಕ್ಷಕರ ಶಿಕ್ಷೇತರ ಹಾಗೂ ವ್ಯಾಯಾಮ ಶಿಕ್ಷಕರುಗಳ ಮತ್ತು ಜವಾನರುಗಳ ಹುದ್ದೆಗಳ ಸಂಖ್ಯೆ ಎಷ್ಟು ಹಾಗೂ ಎಷ್ಟು ವರ್ಷಗಳಿಂದ ಅವು ಖಾಲಿ ಇವೆ ?

ಇ) ಸದರಿ ಖಾಲಿ ಇರುವ ಹುದ್ದೆಗಳನ್ನು ಕಳೆದ ೨ ವರ್ಷಗಳಿಂದ ಹಲವು ಬಾರಿ ಕೇಳಿಕೊಂಡರೂ ಈವರೆಗೆ ಭರ್ತಿ ಮಾಡದಿರಲು ಕಾರಣವೇನು?

ಈ) ಹಾಗಿದ್ದಲ್ಲಿ ಖಾಲಿ ಇರುವ ವಿವಿಧ ಹುದ್ದೆಗಳನ್ನು ಭರ್ತಿ ಮಾಡಲು ಕೈಗೊಂಡ ಕ್ರಮಗಳೇನು ?

ಉ) ಹಾಗೂ ಯಾವಾಗ ಭರ್ತಿ ಮಾಡಲಾಗುವುದು ?

ಶ್ರೀ ಡಿ. ಮಂಜುನಾಥ್ (ಶಿಕ್ಷಣ ಮಂತ್ರಿಗಳು).—

ಅ) ಒಟ್ಟು ೧೫ ಹುದ್ದೆಗಳು.

ಆ) ಸರ್ಕಾರಿ ಕಿರಿಯ ಕಾಲೇಜುಗಳಲ್ಲಿ ಖಾಲಿ ಇರುವ ಶಿಕ್ಷಕರ ಶಿಕ್ಷಕೇತರ ಹುದ್ದೆಗಳ ವಿವರಗಳು ಈ ಕೆಳಕಂಡಂತೆ ಇದೆ.

೧) ಸರ್ಕಾರಿ ಕಿರಿಯ ಕಾಲೇಜು, ಬೆಳ್ಳಾರೆ:

ಹಿಂದಿ ಪಂಡಿತ್	—	೧
ಶಾರೀರಿಕ ಶಿಕ್ಷಕರು	—	೧
ಚಿತ್ರಕಲಾ ಶಿಕ್ಷಕರು	—	೧
ದ್ವಿತೀಯದರ್ಜೆಗುಮಾಸ್ತ	—	೨

೨) ಸರ್ಕಾರಿ ಕಿರಿಯ ಕಾಲೇಜು. ಪಂಜ:

ಶಾರೀರಿಕ ಶಿಕ್ಷಕರು	—	೧

೩) ಸರ್ಕಾರಿ ಕಿರಿಯ ಕಾಲೇಜು, ಸುಳ್ಯ:

ಶಾರೀರಿಕ ಶಿಕ್ಷಕರು	—	೧
ದ್ವಿತೀಯದರ್ಜೆಗುಮಾಸ್ತ		೧
ಸೇವಕರು		೨

೪) ಸರ್ಕಾರಿ ಕಿರಿಯ ಕಾಲೇಜು, ಕಣಿಯೂರು:

ಶಾರೀರಿಕ ಶಿಕ್ಷಕರು	—	೧
ವೃತ್ತಿ ಶಿಕ್ಷಕರು	—	೨
ಸಹಾಯಕ ಶಿಕ್ಷಕರು	—	೧
ದ್ವಿತೀಯದರ್ಜೆಗುಮಾಸ್ತ		೧
ಸೇವಕರು	—	೧

ಸುಮಾರು ೨ ವರ್ಷದಿಂದ ಖಾಲಿ ಇವೆ.

ಇ) ಕಾರಣಗಳು ಈ ಕೆಳಕಂಡಂತಿವೆ:—

ಉಪನ್ಯಾಸಕರ ಹುದ್ದೆಗಳು: ಖಾಲಿ ಇರುವ ಉಪನ್ಯಾಸಕರ ಹುದ್ದೆಗಳನ್ನು ಪ್ರತಿಭಾರಿ ಫೆಬ್ರವಾರ್ಯಿಂದ ವರದಿ ಬಂದ ನಂತರ ನೇಮಕಾತಿ ಮಾಡುತ್ತಲೇ ಬಂದಿದ್ದು, ನೇಮಿಸಿದ ಒಪ್ಪಂದದ ಆಧಾರದ ಉಪನ್ಯಾಕರುಗಳು ಕರ್ತವ್ಯಕ್ಕೆ ಹಾಜರಾಗದೇ ಇದ್ದ ಪ್ರಯುಕ್ತ ಖಾಲಿ ಇರುತ್ತವೆ. ಈಗ ಬಡ್ತಿ ನೀಡಿ ಅಭ್ಯರ್ಥಿಗಳಿಂದ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲಾಗಿದೆ. ವಿಜ್ಞಾನ ವಿಷಯಗಳಲ್ಲಿ ಬಡ್ತಿ ಆಧಾರದ ಅಭ್ಯರ್ಥಿಗಳು ಇರದ ಪ್ರಯುಕ್ತ ಖಾಲಿ ಇರುತ್ತವೆ.

ಅಧ್ಯಾಪಕರುಗಳ ಹುದ್ದೆಗಳು: ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಲಾಗುತ್ತಿದ್ದು ಆ ಸಂದರ್ಭದಲ್ಲಿ ಅರ್ಹ ಅಭ್ಯರ್ಥಿಗಳು ಸಿಗದೆ ಇರುವುದರಿಂದ ಮತ್ತು ನೇಮಕಾತಿ ಹೊಂದಿದ ಅಭ್ಯರ್ಥಿಗಳು ಹಾಜರಾಗದೆ ಇರುವುದರಿಂದ ಖಾಲಿ ಇರುತ್ತವೆ.

ದ್ವಿತೀಯದರ್ಜೆ ಗುಮಾಸ್ತರ ಹುದ್ದೆಗಳು: ಖಾಲಿ ಇರುವ ದ್ವಿತೀಯ ದರ್ಜೆ ಗುಮಾಸ್ತರುಗಳ ಹುದ್ದೆಗಳನ್ನು ಗ್ರೂಪ್ 'ಡಿ' ನೌಕರರಿಗೆ ಬಡ್ತಿ ನೀಡಲು ಕಾಯ್ದಿರಿಸಲಾಗಿದೆ.

ಜವಾನರ ಹುದ್ದೆಗಳು: ಈ ಹುದ್ದೆಗಳನ್ನು ಭರ್ತಿ ಮಾಡಲು ಮಿತವ್ಯಯ ಆದೇಶವು ಜಾರಿಯಲ್ಲಿದ್ದುದರಿಂದ ಭರ್ತಿ ಮಾಡಲು ಆಗಲಿಲ್ಲ.

ಈ) ಉಪನ್ಯಾಸಕರ ಹುದ್ದೆಗಳು: ಸರ್ಕಾರಿ ಕಿರಿಯ ಕಾಲೇಜುಗಳಲ್ಲಿ ಖಾಲಿ ಇರುವ ಉಪನ್ಯಾಸಕರುಗಳ ಹುದ್ದೆಗಳನ್ನು ತುಂಬಲು ವಿಶೇಷ ನೇಮಕಾತಿ ಸಮಿತಿಯಿಂದ ಉಪನ್ಯಾಸಕರುಗಳ ಹುದ್ದೆಗಳಿಗೆ ಅರ್ಜಿಗಳನ್ನು ಕರೆದು ಸಂದರ್ಶನ ನಡೆಸಲಾಗಿದ್ದು ಆಯ್ಕೆ ಗೊಂಡ ಅಭ್ಯರ್ಥಿಗಳ ಪಟ್ಟಿಯು ಸಿದ್ಧವಾಗಿದೆ. ಈ ಬಗ್ಗೆ ನ್ಯಾಯಾಲಯದಲ್ಲಿ ವ್ಯವಹಾರವಿರುವುದರಿಂದ ಪಟ್ಟಿ ಪ್ರಕಟಿಸಲು ಸಾಧ್ಯವಾಗಿಲ್ಲ. ಇದು ಇತ್ಯರ್ಥವಾದ ಕೂಡಲೇ ಕ್ರಮ ಕೈಗೊಳ್ಳಲಾಗುವುದು.

ಅಧ್ಯಾಪಕರ ಹುದ್ದೆಗಳು: ಸಹಾಯಕ ಶಿಕ್ಷಕರ ಹುದ್ದೆಗೆ ಗುತ್ತಿಗೆ ಆಧಾರದ ಮೇಲೆ ಭರ್ತಿ ಮಾಡಲಾಗುತ್ತಿದೆ. ವೃತ್ತಿ ಶಿಕ್ಷಕರ ಹುದ್ದೆಗಳಿಗೆ ರಾಜ್ಯ ಮಟ್ಟದ ನೇಮಕಾತಿ ಸಮಿತಿಯಿಂದ ನೇಮಕಾತಿ ಮಾಡಲಾಗುತ್ತಿದೆ.

ದ್ವಿತೀಯದರ್ಜೆ ಗುಮಾಸ್ತರುಗಳು: ಗ್ರೂಪ್ 'ಡಿ' ನೌಕರರಿಗೆ ದ್ವಿತೀಯದರ್ಜೆ ಗುಮಾಸ್ತರೆಂದು ಬಡ್ತಿ ನೀಡಿ ತುಂಬಲಾಗುತ್ತಿದೆ.

ಜವಾನರ ಹುದ್ದೆಗಳು: ಈ ಹುದ್ದೆಗಳನ್ನು ತುಂಬಲು ಸೂಕ್ತ ಕ್ರಮ ತೆಗೆದು ಕೊಳ್ಳಲಾಗುವುದು.

ಉ) ಈ ಹುದ್ದೆಗಳನ್ನು ಆದಷ್ಟು ಜಾಗ್ರತೆಯಾಗಿ ಭರ್ತಿ ಮಾಡಲಾಗುವುದು.

ಸುಳ್ಯ ತಾಲ್ಲೂಕಿನಲ್ಲಿನ ಪ್ರೌಢಶಾಲೆಗಳಲ್ಲಿ ಖಾಲಿಯಿರುವ ಹುದ್ದೆಗಳ ಬಗ್ಗೆ

೧೪೫ (೪೫೧೧) ಶ್ರೀ ಕೆ. ಕುಶಾಲ (ಸುಳ್ಯ). ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :—

ಅ) ಸುಳ್ಯ ವಿಧಾನಸಭಾ ಕ್ಷೇತ್ರದ ಪುತ್ತೂರು ತಾಲ್ಲೂಕಿನ ಕವು ಸರ್ಕಾರಿ ಪ್ರೌಢಶಾಲೆಯಲ್ಲಿ ವಿವಿಧ ಪಠ್ಯೇತರ ವಿಷಯಗಳಲ್ಲಿ ಖಾಲಿ ಇರುವ ಅಧ್ಯಾಪಕರ ಹುದ್ದೆಗಳ ಸಂಖ್ಯೆ ಎಷ್ಟು ?

ಆ) ಸದರಿ ಶಾಲೆಗಳಲ್ಲಿ ಖಾಲಿ ಇರುವ ಶಿಕ್ಷಕೇತರ ಸಿಬ್ಬಂದಿಗಳ ಸಂಖ್ಯೆ ಎಷ್ಟು ? ಇವುಗಳನ್ನು ಕಳೆದ ಎರಡು ವರ್ಷಗಳಿಂದ ಭರ್ತಿ ಮಾಡುವಂತೆ ಕೇಳಿಕೊಂಡರೂ ಭರ್ತಿ ಮಾಡದಿರಲು ಕಾರಣಗಳೇನು ?